ಅರ್ಜಿಯನ್ನು ಉಪಕಾರ್ಮಿಕ ಆಯುಕ್ತರು, ವಿಭಾಗ-೧ರವರ ಮುಂದೆ ಸಲ್ಲಿಸಿ, ಇದರ ಬಗ್ಗೆ ಸಂಧಾನೆ ನಡೆಯುತ್ತಿರುವಾಗಲೇ ದಿನಾಂಕ ೨೮-೫-೧೯೮೮ ರಂದು ಒಂದು ನೋಟೀಸ್ ಕೊಟ್ಟು ಹೊಸ ಒಪ್ಪಂದಕ್ಕೆ ಕಾರ್ಮಿಕರು ಒಪ್ಪದಿದ್ದರೆ (ಆಕೇಷನಲ್ ಕಾರ್ಮಿಕರು) ಲೇ-ಆಫ್ ಮಾಡಲಾಗುವುದೆಂದು ತಿಳಿಸಿದ್ದಾರೆ. ದಿನಾಂಕ ೧-೬-೧೯೮೮ ರಿಂದ ೩೮೪ ಜನ ಕೆಲಸಗಾರರನ್ನು ಕೆಲಸದಿಂದ ನಿರಾಕರಿಸಿರುತ್ತಾರೆ. ನಂತರ ಕಾರ್ಮಿಕ ಸಂಘದವರಿಂ ಮುಖ್ಯರ ಹೂಡಿದ್ದು ಅದು ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ-೧, ಬೆಂಗಳೂರು ಇವರ ಮುಂದೆ ಸಂಧಾನಕ್ಕೆ ಬಂದಿದ್ದು, ದಿನಾಂಕ ೩-೬-೧೯೮೮ ರಂದು ಸಂಧಾನ ನಡೆಯಿತು. ಆ ಸಂಧಾನ ಸಭೆಗೆ ಆಡಳಿತ ವರ್ಗದವರು ಅಧಿಕೃತವಾಗಿ ಯಾರೂ ಹಾಜರಿರದ ಪ್ರಯುಕ್ತ ಸಂಧಾನ ವಿಫಲವಾಯಿತಂ. ಅದೇ ೪-೬-೧೯೮೮ ರಂದು ಸಂಜೆ ೭ ಗಂಟೆಗೆ ಭಿಗಮುಂದೆ ಫೋಷಿಸಲಾಯಿತು. ಇದು ಕಾರ್ಮಿಕರ ಗಮನಕ್ಕೆ ಬಂದ ಕೂಡಲೆ ದಿನಾಂಕ ೬-೬-೧೯೮೮ ರಂದು ಜಂಟಿ ಕಾರ್ಮಿಕ ಆಯುಕ್ತರು ೧ ರವರು ಸಂಧಾನ ಪ್ರಯತ್ನಗಳನ್ನು ನಡೆಸಿದರು. ಸಂಧಾನ ಪ್ರಯತ್ನಗಳನ್ನು ದಿನಾಂಕ ೭ ೬-೧೯೮೮ ಹಾಗೂ ೮ ೬-೧೯೮೮ ರಲ್ಲೂ ನಡೆಸಲಾಯಿತು. ದಿನಾಂಕ ೮-೬-೧೯೮೮ ರಂದೂ ಸಂಧಾನ ಮುಂದುವರಿದರೂ ಸಹ ಯಾವುದೇ ಒಡಂಬಡಿಕೆ ಅಥವಾ ಒಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ. ಆದ್ದರಿಂದ ಕಾರ್ಮಿಕರ ಮತ್ತು ಆಡಳಿತ ವರ್ಗದವರ ಕೈಗಾರಿಕಾ ವಿವಾದವನ್ನು ಔದ್ಯಮಿಕ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ. ಮತ್ತು ಆಡಳಿತ ವರ್ಗದವರು ಮುಂದುವರಿಸಿದ ಬೀಗಮುದ್ರೆಯನ್ನು ಮುಂದುವರಿಸಕೂಡದು ಎಂದು ನಿಷೇದಾಜ್ಞೆಯನ್ನು ಹೊರಡಿಸಲಾಗಿದೆ.

ಇನ್ನು ರಾಂಕುಮಾರ್ ಮಿಲ್ ಬಗ್ಗೆ ಈಗಾಗಲೇ ಸಂಬಂಧಪಟ್ಟವರಿಗೆ ನೋಟೀಸ್ ಕೊಟ್ಟಿದ್ದಾರೆ. ಅಲ್ಲಿಂದ ಉತ್ತರ ಬಂದಕೂಡಲೇ ಕಾನೂನು ಕ್ರಮವನ್ನು ತೆಗೆದುಕೊಳ್ಳಲಾಗುವುದು.

## ೭) ಉಳ್ಳಾಲದ ಪೋಲೀಸ್ ಸ್ಟೇಷನ್ನಿನ ವ್ಯಾಪ್ತಿಯಲ್ಲಿ ಬರುವ ಪೋಲೀಸರಿಗೆ ವಸತಿ ಗೃಹಗಳನ್ನು ಕಟ್ಟಿಸುವುದು

ಶ್ರೀ ಬಿ.ಎಂ. ಇದಿನಬ್ಬ.—ಉಳ್ಳಾಲದಲ್ಲಿರುವ ಪೋಲೀಸ್ ಸ್ಟೇಷನ್ ಬಾಡಿಗೆ ಕಟ್ಟಡದಲ್ಲಿ ಸ್ಥಾಪನೆಯಾದ ಲಾಗಾಯ್ತು ಈವರೆವಿಗೂ ಇದೆ. ಸುಮಾರು ೧೫ ಗ್ರಾಮಗಳು ಮತ್ತು ಒಂದು ಲಕ್ಷ ಜನರಿಗೆ ಒಳಪಟ್ಟು ಈ ಸ್ಟೇಷನ್ ಕಾರ್ಯನಿರ್ವಹಿಸುತ್ತಿದೆ. ಇಲ್ಲಿನ ಪೋಲೀಸರಿಗೆ ವಸತಿಗೃಹಗಳು ಇಲ್ಲದೆ ತುಂಬಾ ಕಷ್ಟದಲ್ಲಿರುತ್ತಾರೆ. ಇದಕ್ಕಾಗಿ ಎರಡೂವರೆ ಎಕ್ರೆ ಜಮೀನನ್ನು ಪೋಲೀಸ್ ಸ್ಟೇಷನ್ ಮತ್ತು ಪೋಲೀಸ್ ವಸತಿಗೃಹಗಳಿಗಾಗಿ ನಾಲ್ಕು ವರ್ಷಗಳ ಹಿಂದೆ ತೆಗೆದು ಬೇಲಿ ಹಾಕಿ ಮಾಸಲಾಗಿ ಇಡಲಾಗಿದೆ ಹಿಂದಿನ ಗೃಹ ಸಚಿವರುಗಳಾದ ಮಾನ್ಯ ಶ್ರೀ ಬಿ. ರಾಚಯ್ಯ ಮತ್ತು ಮಾನ್ಯ ಶ್ರೀ ಜಾಲಪ್ಪನವರು ೧೯೮೬ ರಲ್ಲಿ ಆ ಕಾರ್ಯ ಕೈಗೆತ್ತಿಕೊಳ್ಳಲಾಗುವುದೆಂದು ಹೇಳಿದ್ದರು. ಆದರೆ ಈವರೆಗೂ ಇನ್ನೂ ಕೈಗೆತ್ತಿಗೊಂಡಿಲ್ಲ. ಉಳ್ಳಾಲದಲ್ಲಿ ಪೋಲೀಸ್ ಸ್ಟೇಷನ್ ಮತ್ತು ವಸತಿಗೃಹಗಳು ಅತೀ ಅಗತ್ಯವಾಗಿದ್ದಾಗಿರುತ್ತದೆ. ಆದಕಾರಣ ೧೯೮೮-೮೯ರ ಸಾಲಿನಲ್ಲಿ ಈ ಕೆಲಸವನ್ನು ಮಾಡಿಸಿಕೊಡುವುದು ಅತೀ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ.—ಆ ಊರಿನಲ್ಲಿ ಪೋಲೀಸ್ ಸ್ಟೇಷನ್ ಕಟ್ಟಡವನ್ನು ಕಟ್ಟಿಸಲಿಕ್ಕೆ ಆಧ್ಯತೆಯ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ವಸತಿಗೃಹಗಳ ಬಗ್ಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೫ ಪರ್ಸೆಂಟ್‌ನಷ್ಟು ಪೋಲೀಸರಿಗೆ ವಸತಿಗೃಹಗಳನ್ನು ಒದಗಿಸಿಕೊಟ್ಟಿದ್ದೇವೆ. ಉಳಿದವರಿಗೆ ಗೃಹನಿರ್ಮಾಣ ಸಂಸ್ಥೆಗಳಾದ ಎಚ್‌ಡಿಎಫ್‌ಸಿ ಮತ್ತು ಯುಂಡಿಐ ಸಂಸ್ಥೆಗಳಿಂದ ದೊರೆಯತಕ್ಕಂಥ ಸಾಲ ಮತ್ತು ಅನುದಾನಗಳನ್ನು ಅನುಸರಿಸಿ ಈ ವಸತಿಗೃಹ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುತ್ತದೆ.